ಮುಂಚಿತವಾಗಿಯೇ ಆಕೆಯನ್ನು ವಾರ್ಡ್‌ನಲ್ಲಿ ಒಳರೋಗಿಯಾಗಿ ದಾಖಲಿಸಿಕೊಂಡರು.

ಅಂತೂ ಆ ಗಳಿಗೆ ಬಂದಿತು. ಭಯ ಯಾತನೆ ಪ್ರೀತಿಯಿಂದ ಕೂಡಿ ಅವಳು ಪುಟ್ಟ ಜೀವದ ಆಗಮನದ ನಿರೀಕ್ಷೆ ಮಾಡಿದಳು. ಆದರೆ ನಸೀಮಾಳ ಅಸಹಾಯಕ ಮತ್ತು ಸೋಲೊಪ್ಪಿಕೊಳ್ಳದ ಹೋರಾಟವನ್ನು ಅವಳು ಸಹಿಸದಾದಳು. ಈ ಹಿಂದೆ ಉಭ–ಶುಭ ಎನ್ನದೆ ಇದ್ದ ವೈದ್ಯರು 'ರಕ್ತ ಬೇಕು ರಕ್ತ ಬೇಕು' ಎಂಬ ಘೋಷಣೆಯನ್ನು ರಚ್ಚೆ ಹಿಡಿದ ಮಗುವಿನಂತೆ ಪ್ರತಿಧ್ವನಿಸತೊಡಗಿದರು. ಜೀನತ್‌ಳ ಜೊತೆಯಲ್ಲಿ ಅನೀಸ್ ಬೆಂಗಾವಲಿದ್ದ. ಯಾಕೋ ಅವನ ಕಣ್ಣುಗಳು ಕೆಂಪೇರಿವೆ ಎಂದು ಅವಳಿಗೆ ಅನ್ನಿಸಿ ಅವನು ಅತ್ತಿರಬಹುದೇ ಎಂಬ ಅನುಮಾನವು ಕೂಡ ಮೂಡಿತು. ಹೀಗೆ ಸಣ್ಣಗೆ ಆರಂಭವಾದ ಅನುಮಾನವು ಬೇರು ಬಿಡುತ್ತಾ ಹೋಗಿ ನಸೀಮಾಳ ಜೀವಕ್ಕೆ ಏನಾದರೂ ಅನಾಹುತವಾಗಿರಬಹುದೇ ಎಂಬ ಅಚಾನಕವಾದ ಮತ್ತು ಅನಿರೀಕ್ಷಿತವಾದ ಭಾವ ಬಲಿಯುತ್ತಿದ್ದಂತೆ ಅವಳು ಶಕ್ತಿಗುಂದತೊಡಗಿದಳು. ಆಕೆ ಎಷ್ಟೇ ಹಟ ಮಾಡಿದರೂ ಅನೀಸ್ ಅವಳನ್ನು ಲೇಬರ್ ವಾರ್ಡಿನಲ್ಲಿ ಬಿಡದೆ ತಮ್ಮ ನಿಗದಿತ ವಾರ್ಡ್‌ನಲ್ಲಿ ಇರಿಸಿಕೊಂಡಿದ್ದ.

ಅಂತೂ ಅವಳ ಮಹದಾಸೆ ನೆರವೇರಿತು. ಅದೊಂದು ಅದ್ಭುತವೆಂಬಂತೆ ಮೃದುವಾದ ಹತ್ತಿ ಬಟ್ಟೆಯಲ್ಲಿ ಸುತ್ತಿದ ಆ ಹೆಣ್ಣು ಕೂಸನ್ನು ತಂದು ಜೀನತ್‌ಳ ಚಾಚಿದ ಕೈಗಳಲ್ಲಿ ನರ್ಸ್ ಇಟ್ಟಾಗ ಅವಳು ರೋಮಾಂಚಿತಳಾದಳು. ವಿಶ್ವದ ಸೃಷ್ಟಿಯ ಮೊದಲ ಕೂಸನ್ನು ಆಲಂಗಿಸುತ್ತಿದ್ದೇನೆ ಎಂಬ ಭಾವದಲ್ಲಿ ಆ ಕೂಸನ್ನು ಎದೆಗವಚಿ ಕೊಂಡಳು. ಒಂದೇ ಒಂದು ಕ್ಷಣದ ಅನುಭವದಲ್ಲಿ ಅವಳು ಇಡೀ ಜಗತ್ತಿನ ಮಾತೃತ್ವವನ್ನು ಅನುಭವಿಸುತ್ತಿದ್ದಳು. ಕ್ಷಣದಲ್ಲೇ ನರ್ಸ್ ಆ ಮಗುವನ್ನು ಕರೆದೊಯ್ದಳು. ಆ ಕಣ್ಣು ಆ ತುಟಿಗಳು ಮೈಬಣ್ಣ ಎಂಥಾದಿವ್ಯ! ಒಂದೇ ಒಂದು ಬಾರಿ ಅರೆ ತೆರೆದ ಕಣ್ಣುಗಳಿಂದ ಹೊಮ್ಮಿದ ಆ ಮಗುವಿನ ನೋಟಕ್ಕೆ ಅವಳು ಕರಗಿ ಹೋದಳು.

ಮುಂದಿನ ಕ್ಷಣದಲ್ಲಿಯೇ ಅಲ್ಲಿ ಬಂದು ನಿಂತ ಅನೀಸ್ ಅವಳ ಸೊಂಟವನ್ನು ಬಳಸಿ ಅವಳನ್ನು ಆಸ್ಪತ್ರೆಯ ಇನ್ನೊಂದು ಭಾಗಕ್ಕೆ ಕರೆತಂದ. ಅಲ್ಲಿದ್ದ ಎಳೆ ಹರೆಯದ ಹುಡುಗಿಯೊಬ್ಬಳು ಸಿರಂಜಿನ ಮೂಲಕ ಅವಳ ರಕ್ತವನ್ನು ಹೀರಿ ತೆಗೆದಳು. ಅವಳು ಪ್ರತಿಭಟಿಸಿದಳು ''ಯಾಕೆ ಅನೀಸ್ ನನ್ನ ರಕ್ತ ಯಾಕೆ ಬೇಕು?'' ''ಬಾಣಂತಿ ಮತ್ತು ಮಗುವಿಗೆ ರಕ್ತ ಬೇಕು ಅಮ್ಮ" ಅವನು ಅಸ್ಪಷ್ಟವಾಗಿ ನುಡಿದ. ಅವಳನ್ನು ಎಳೆದುಕೊಂಡು ಹೋದಂತೆ ಕಾರಿನಲ್ಲಿ ಕೂರಿಸಿ ಮನೆಗೆ ತಂದ. ಜೀನತ್‌ಳ ಚಡಪಡಿಕೆಯನ್ನು ಕೂಡ ಲೆಕ್ಕಿಸದೆ ಅವಳನ್ನು ಕೂಡಲೇ ಬೆಂಗಳೂರಿಗೆ ಕರೆತಂದರು. ವಾರದ ಕಾಲ ಜೀನತ್ ಅವಳ ತಂಗಿಯ ಮನೆಯಲ್ಲಿಯೇ ಉಳಿದಳು. ಒಂದು ವಾರದ ನಂತರ ಅವಳ ಯಾವ ಪ್ರತಿರೋಧವನ್ನಾಗಲೀ ಅಥವ ಆರೋಪಗಳನ್ನಾಗಲೀ ಅಥವಾ ರಂಪಾಟಗಳನ್ನು ಪರಿಗಣಿಸದೆ ಅವಳ ಪತಿ ಅವಳನ್ನು ಮೆಕ್ಕಾಗೆ ಕರೆದುಕೊಂಡು ಹೋದ. ಅನೀಸ್ ಕೂಡಾ ಯಾತ್ರೆಯುದ್ದಕ್ಕೂ ಅವರ ಜೊತೆಗೂಡಿದ್ದ. ಉಮ್ರಾ ಯಾತ್ರೆಯನ್ನು ಕೈಗೊಂಡು ಮದೀನಾದಲ್ಲಿ ಅವರು ಪ್ರಾರ್ಥನೆಯನ್ನು ಮಾಡುತ್ತಿದ್ದಾಗ ಅವಳಿಗೆ ಅತ್ಯಂತ ವಿಷಾದದಿಂದ ನುಡಿದಿದ್ದ: "ನಸೀಮ ಮತ್ತು ಅವಳ ಮಗುವಿಗಾಗಿ ಪ್ರಾರ್ಥನೆ ಮಾಡಿ ಅಮ್ಮ. ಅವರಿಬ್ಬರು ತುಂಬಾ ಕಾಯಿಲೆಯಿಂದಿದ್ದಾರೆ."

ಜೀನತ್‌ಳ ಜಗತ್ತೇ ಅಯೋಮಯವಾಯಿತು. ಎಲ್ಲೋ ಏನೋ ಆಗಬಾರದ ಅನಾಹುತ ಘಟಿಸಿದೆ ಎಂಬುದು ಅವಳ ಅರಿವಿಗೆ ಈಗಾಗಲೇ ಬಂದಿತ್ತು. ಆದರೂ ಅವಳು ತನ್ನ ಎಲ್ಲಾ ದುಃಖವನ್ನು ಅಡಗಿಸಿಕೊಂಡು, ''ಆ ಕೂಸಿಗೆ ಏನಂತ ಹೆಸರಿಟ್ಟರು ಅನೀಸ್? ಯಾರು ಹೆಸರಿಟ್ಟರು? ಆ ಮಗುವಿನ ಕಿವಿಯಲ್ಲಿ ಯಾರು ಅಝಾನ್ ಹೇಳಿದರು?" ಅನೀಸ್ ಏನನ್ನೂ ಪಡಿ ನುಡಿಯಲಿಲ್ಲ. ಅವನ ಅಗಾಧ ಮೌನದ ಕ್ರೌರ್ಯ ಅವಳ ಎದೆಯನ್ನು ಸೀಳಿತು. ಅವಳ ಯಾತನೆ ಮತ್ತು ನೋವಿನ ಆವೇಗಕ್ಕೂ ಮಣಿಯದ ಆ ತೆರೆಯದ ಬಾಗಿಲಿನ ಮುಂದೆ ಕುಳಿತು ಅವಳು ಪ್ರಾರ್ಥನೆಯ ರೂಪದಲ್ಲಿ ತನ್ನ ಎರಡು